HDFC ERGO

Take it easy!

# ಪುನರ್ನಿರ್ಮಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ - ಕರ್ನಾಟಕ

ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶ್ಯೂರನ್ಸ್ ಕಂಪನಿಯನ್ನು, ಬೆಂಗಳೂರು (ನಗರ ಹಾಗೂ ಗ್ರಾಮೀಣ), ತುಮಕೂರು, ಚಿತ್ರದುರ್ಗ ಹಾಗೂ ಯಾದಗಿರ್ ಜಿಲ್ಲೆಗಳಲ್ಲಿನ ಸಾಲಗಾರ ಹಾಗೂ ಸಾಲಗಾರರಲ್ಲದ ಕೃಷಿಕರಿಗಾಗಿ **ಪುನರ್ನಿರ್ಮಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ** (ಆರ್-ಡಬ್ಲ್ಯೂಬಿಸಿಐಎಸ್) ಕಾರ್ಯರೂಪಕ್ಕೆ ತರಲು ಕರ್ನಾಟಕ ಸರ್ಕಾರದಿಂದ ಅಧಿಕೃತಗೊಳಿಸಲಾಗಿದೆ, ಮುಂಗಾರು (ಖಾರಿಫ್) 2018ಕ್ಕಾಗಿ ಯೋಜನೆಯಡಿಯಲ್ಲಿ ಸೂಚಿಸಿರುವ ಬೆಳೆಗಳು ಈ ಕೆಳಗಿನಂತಿವೆ:

- **ಬೆಂಗಳೂರು (ನಗರ ಹಾಗೂ ಗ್ರಾಮೀಣ)** - ದ್ರಾಕ್ಷಿ, ಮಾವು
- **ಚಿತ್ರದುರ್ಗ** - ಅಡಿಕೆ, ಮಾವು, ದಾಳಿಂಬೆ
- **ತುಮಕೂರು** - ಅಡಿಕೆ, ಮಾವು, ಪೊಪ್ಪಾಯ, ದಾಳಿಂಬೆ
- **ಯಾದಗಿರ್** - ಮೆಣಸು

**ಯೋಜನೆಯ ಮೇಲ್ನೋಟ:**

ಆರ್-ಡಬ್ಲ್ಯೂಬಿಸಿಐಎಸ್ ಎನ್ನುವುದು ಪ್ರಮುಖ ಬೆಳೆ ವಿಮಾ ಯೋಜನೆಯಾದ **ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ**ಯಡಿಯಲ್ಲಿನ ಪುನರ್ನಿರ್ಮಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಾಗಿರುತ್ತದೆ. ಆರ್-ಡಬ್ಲ್ಯೂಬಿಸಿಐಎಸ್ ವಿಮೆ ಮಾಡಿಸಿರುವ ಕೃಷಿಕರಿಗೆ ಮಳೆ, ತಾಪಮಾನ, ಗಾಳಿ, ಆರ್ದ್ರತೆ ಮುಂತಾದ ಪ್ರತಿಕೂಲ ವಾತಾವರಣದಿಂದ ಉಂಟಾಗುವ ನಿರೀಕ್ಷಿತ ಬೆಳೆ ನಷ್ಟಗಳ ಕಾರಣದಿಂದಾಗುವ ಹಣಕಾಸಿನ ನಷ್ಟಗಳ ಸಂಭಾವ್ಯತೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ. ಡಬ್ಲ್ಯೂಬಿಸಿಐಎಸ್‌ಯು ತೀರ್ಮಾನಿಸಲಾದ ಬೆಳೆನಷ್ಟಗಳಿಗಾಗಿ ಬೆಳೆಗಾರರಿಗೆ ಪರಿಹಾರ ನೀಡುವಲ್ಲಿ ಬೆಳೆಯ ಇಳುವರಿಗಾಗಿ ''ಪ್ರಾಕ್ಸಿ'' ಯಾಗಿ ಹವಾಮಾನ ಮಾನದಂಡಗಳನ್ನು ಬಳಸುತ್ತದೆ. ಹವಾಮಾನ ಪ್ರಚೋದಕಗಳನ್ನು ಬಳಸಿಕೊಂಡು ಅನುಭವಿಸಿದ ನಷ್ಟಗಳ ವ್ಯಾಪ್ತಿಗೆ ಪಾವತಿಸುವ ರಚನೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಪಿಎಮ್‌ಎಫ್‌ಬಿವಾಯ್ (ಆರ್ -ಡಬ್ಲ್ಯೂಬಿಸಿಐಎಸ್) ಯೋಜನೆಯಡಿಯಲ್ಲಿನ ಎಲ್ಲಾ ವಿಮಾ ರಕ್ಷಣೆಗಳು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯಿಂದ ಅನುಮೋದಿಸಲ್ಪಟ್ಟಿದೆ. ಮೇಲೆ ಪಟ್ಟಿ ಮಾಡಿರುವ ಬೆಳೆಗಳಿಗಾಗಿ ಪಿಎಮ್‌ಎಫ್‌ಬಿವಾಯ್ ಯಡಿಯಲ್ಲಿ ವಿಮಾ ರಕ್ಷಣೆಯನ್ನು ಪಡೆಯಲು ಬೆಂಗಳೂರು (ನಗರ ಹಾಗೂ ಗ್ರಾಮೀಣ), ತುಮಕೂರು, ಚಿತ್ರದುರ್ಗ ಹಾಗೂ ಯಾದಗಿರ್ ಜಿಲ್ಲೆಯ ಕೃಷಿಕರು ತಮ್ಮ ಜಿಲ್ಲೆಯಲ್ಲಿನ ತಮ್ಮ ಆಯಾ ಬ್ಯಾಂಕುಗಳನ್ನು, ಕಾಮನ್ ಸರ್ವಿಸ್ ಸೆಂಟರ್‌ಗಳನ್ನು (ಸಿಎಸ್‌ಸಿಗಳು)ತಲುಪಬಹುದು ಅಥವಾ ಅಧಿಕೃತ ಎಚ್‌ಡಿಎಫ್‌ಸಿ ಎರ್ಗೋ ಎಂಜಂಟ್‌ಗಳನ್ನು ಸಂಪರ್ಕಿಸಬಹುದು. ವಿಮಾರಕ್ಷಣೆಯನ್ನು ಪಡೆಯಲು ಮಾನ್ಯತೆಯ ಅವಧಿಯ ವಿವರಗಳು ಕೃಷಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಕೃಷಿಕರಿಗಾಗಿ ಲಭ್ಯವಿರುತ್ತದೆ.

**ಯೋಜನೆಯ ವೈಶಿಷ್ಟತೆಗಳು:**

**ಮುಂಗಾರು 2018ಕ್ಕಾಗಿ ವಿಮಾರಕ್ಷಣೆಯನ್ನು ಒಳಗೊಂಡಿರುವ ಹವಾಮಾನ ಆಪತ್ತುಗಳು**

ಗ್ರಾಹಕರ ಮಾಹಿತಿಯನ್ನು ಅವಲೋಕಿಸಿ

1. ಬೆಳೆನಷ್ಟಗಳಿಗೆ ಕಾರಣವಾಗುವ ''ಪ್ರತಿಕೂಲ ಹವಾಮಾನದ ಘಟನೆ''ಗೆ ಕಾರಣವಾಗಿ ಭಾವಿಸುವ, ಈ ಕೆಳಗಿನ ಪ್ರಮುಖ ಹವಾಮಾನದ ಆಪತ್ತುಗಳು, ಯೋಜನೆಯ ಅಡಿಯಲ್ಲಿ ವಿಮಾರಕ್ಷಣೆಯನ್ನು ಒಳಗೊಂಡಿರುತ್ತವೆ:

- ಮಳೆ - ಮಳೆಯ ಕೊರತೆ, ಅತಿಯಾದ ಮಳೆ, ಅಕಾಲಿಕ ಮಳೆ, ಮಳೆಗಾಲದ ದಿನಗಳು, ಮಳೆ ಇಲ್ಲದಿರುವಿಕೆ, ಬರಗಾಲದ ದಿನಗಳು
- ತಾಪಾಮಾನ - ಅಧಿಕ ತಾಪಮಾನ (ಉಷ್ಣ), ಕಡಿಮೆ ತಾಪಮಾನ
- ಸಾಪೇಕ್ಷ ಆರ್ದ್ರತೆ
- ಮೇಲಿನವುಗಳ ಸಂಯೋಜನೆ
- ಆಲಿಕಲ್ಲು ಮಳೆ

ಮಾನದಂಡಗಳ ಸೂಚಕಗಳೊಂದಿಗೆ ವಿಮಾರಕ್ಷಣೆಯನ್ನು ಒಳಗೊಂಡಿರುವ ಆಪತ್ತಿನ ವಿವರಗಳನ್ನು ಕರ್ನಾಟಕ ಸರ್ಕಾರದ, ಕೃಷಿ ಇಲಾಖೆಯ ಸಂರಕ್ಷಣೆ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

https://www.samrakshane.karnataka.gov.in/

ಕರ್ನಾಟಕ ಸ್ಟೇಟ್ ನ್ಯಾಚ್ಯೂರಲ್ ಡಿಸಾಸ್ಟರ್ ಮಾನಿಟರಿಂಗ್ ಸೆಂಟರ್ (ಕೆಎಸ್‌ಎನ್‌ಡಿಎಮ್‌ಸಿ)ಯಿಂದ ದಾಖಲಿಸಲಾಗಿರುವ ದೈನಂದಿನ ಹವಾಮಾನದ ನಿಯತಾಂಕಗಳನ್ನು ಟರ್ಮ್ ಶೀಟ್‌ಗಳು ಡಿಜಿಟಲಿ ಸೆರೆಹಿಡಿದಿವೆ.

**ಕ್ಲೇಮ್‌ಗಳ ಇತ್ಯರ್ಥ:**

ಕ್ಲೇಮ್‌ಗಳನ್ನು ರಾಜ್ಯ ಸರ್ಕಾರದಿಂದ ಸೂಚಿಸಲ್ಪಟ್ಟಂತೆ ಪಡೆದಿರುವ/ಆಟೋಮೇಟೆಡ್ ವೆದರ್ ಸ್ಟೇಷನ್ (ಎಡಬ್ಲ್ಯೂಸ್)ನಲ್ಲಿ ದಾಖಲಾಗಿರುವ ಮೇಲಿನ ಡೇಟಾದ ಆಧಾರದ ಮೇಲೆ ಹಾಗೂ ಪ್ರಾಡಕ್ಟ್ ಸ್ಟ್ರಕ್ಚರ್/ಟರ್ಮ್ ಶೀಟ್ ಹಾಗೂ ರೆಫರೆನ್ಸ್ ಯೂನಿಟ್ ಕ್ಷೇತ್ರಗಳು (ಆರ್‌ಯುಎ) ಹಾಗೂ ವಿವಿಧ ಬೆಳೆಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ. ಕ್ಲೇಮ್‌ಗಳ ಪರಿಹಾರದ ಲೆಕ್ಕಾಚಾರವು ಸ್ವಯಂಚಾಲಿತವಾಗಿರುತ್ತದೆ ಹಾಗೂ ಸಂರಕ್ಷಣಾ ಪೋರ್ಟಲ್‌ನಲ್ಲಿ ಕರ್ನಾಟಕ ಸ್ಟೇಟ್ ನ್ಯಾಚ್ಯೂರಲ್ ಡಿಸಾಸ್ಟರ್ ಮಾನಿಟರಿಂಗ್ ಸೆಂಟರ್ (ಕೆಎಸ್‌ಎನ್‌ಡಿಎಮ್‌ಸಿ)ನಿಂದ ವಿದ್ಯುನ್ಮಾನಿಕವಾಗಿ ಪಡೆದಿರುವ ಹವಾಮಾನದ ಡೇಟಾ (ಅಂಕಿಅಂಶ)ವನ್ನು ಬಳಸಿಕೊಂಡು ಮಾಡಲಾಗುತ್ತದೆ.

**ಆಟೋಮ್ಯಾಟಿಕ್ ವೆದರ್ ಸ್ಟೇಷನ್‌ನ ಪಟ್ಟಿಯನ್ನು ವೀಕ್ಷಿಸಿ**

**ಹೆಚ್ಚಿನ ಮಾಹಿತಿಗಾಗಿ :**

- **ದಯವಿಟ್ಟು ಮೀಸಲಾಗಿರುವ ನಮ್ಮ ಗ್ರಾಮೀಣ ಕಾಲ್ ಸೆಂಟರ್ ಅನ್ನು ಸಂಪರ್ಕಿಸಿ** 1800 2660 700

| ರಾಜ್ಯ | ಸೂಚಿತ ಜಿಲ್ಲೆ | ಸಂಪರ್ಕಿಸ ಬೇಕಾದ ವ್ಯಕ್ತಿ | ಸಂಪರ್ಕಿಸ ಬೇಕಾದ ವಿಳಾಸ | ಸಂಪರ್ಕ ಸಂಖ್ಯೆ |
|---|---|---|---|---|
| ಕರ್ನಾಟಕ | ಬೆಂಗಳೂರು ನಗರ | ಸಂತೋಷ್ ಗಂಜೆ | ನಂ. 25/1, 2ನೇ ಮಹಡಿ, ಬಿಲ್ಡಿಂಗ್ ನಂಬರ್ 2, ಶಂಕರನಾರಾಯಣ ಬಿಲ್ಡಿಂಗ್, ಎಮ್‌ಜಿ ರೋಡ್, ಬೆಂಗಳೂರು-560001 | 6361443599 |
| ಕರ್ನಾಟಕ | ಬೆಂಗಳೂರು ಗ್ರಾಮೀಣ | ಸಂತೋಷ್ ಗಂಜೆ | ನಂ. 2/1-1,2ನೇ ಮಹಡಿ, 11ನೇ ಮೇನ್ ರೋಡ್, ಜಯನಗರ, ಬೆಂಗಳೂರು-560011 | 6361443599 |
| ಕರ್ನಾಟಕ | ಚಿತ್ರದುರ್ಗ | ಅಶ್ವಿನಿ | 1ನೇ ಮಹಡಿ , ವಿರುಪಾಕ್ಷಕೃಪಾ, ಕೈಎಮ್‌ಎಸ್ ಮೇನ್ ಗೇಟ್ ಎದುರು, ಆರ್ ಬಿ ರೋಡ್, ವಿದ್ಯಾನಗರ, ಹುಬ್ಬಳ್ಳಿ -580 021 | 9152928451 |
| ಕರ್ನಾಟಕ | ಯಾದ್‌ಗಿರ್ | ಸಂತೋಷ್ ಗಂಜೆ | 2ನೇ ಮಹಡಿ, 101/ಎ/ಎಸ್‌ಎಫ್2, ಕೃಷ್ಣಕೃಪಾ, ಕನ್ನಡ ಭವನದ ಎದುರು, ಮೇನ್ ರೋಡ್ , ಎಸ್‌ವಿಪಿ ಸರ್ಕಲ್, ಕಲಬುರ್ಗಿ -585102 | 6361443599 |
| ಕರ್ನಾಟಕ | ತುಮಕೂರು | ಅಶ್ವಿನಿ | ನಂ. 2/1-1,2ನೇ ಮಹಡಿ, 11ನೇ ಮೇನ್ ರೋಡ್, ಜಯನಗರ, ಬೆಂಗಳೂರು- 560011 | 9152928451 |

**ಎಸ್ಕೆಲೇಷನ್**

**ಮಟ್ಟ**

| | | | | |
|---|---|---|---|---|
| ವ್ಯವಸ್ಥಾಪಕರು | **ಕರ್ನಾಟಕ** | ಕಿರಣ್ ಗೊಲ್ಲಾ | ನಂ. 2/1-1. 2ನೇ ಮಹಡಿ, 11ನೇ ಮೇನ್ ರೋಡ್, ಜಯನಗರ, ಬೆಂಗಳೂರು-560011988539 | 9885396744 |
| ಪ್ರಾದೇಶಿಕ ವ್ಯವಸ್ಥಾಪಕರು | | ಹರೀಷ್ ದುಬೆ | ನಂ. 2/1-1. 2ನೇ ಮಹಡಿ, 11ನೇ ಮೇನ್ ರೋಡ್, ಜಯನಗರ, ಬೆಂಗಳೂರು-560011740008 | 7400087823 |

ದಯವಿಟ್ಟು ನಮ್ಮ ಅಫಿಶಿಯಲ್ ವೆಬ್‌ಸೈಟ್ [www.hdfcergo.com](http://www.hdfcergo.com) ನಲ್ಲಿ ಪಿಎಮ್‌ಎಫ್‌ಬಿವಾಯ್ ವಿಭಾಗಕ್ಕೆ ಭೇಟಿನೀಡಿ